# ಸನ್ನಾ ಎಂಬ ಸೋಜಿಗ!



■ ಪ್ರವೀಣ ಕುಲಕರ್ಣಿ

ನಮ್ಮ ದೇಶದಲ್ಲಿ ಆಗಿದ್ದರೆ ಇಂತಹ ವಿದ್ಯಮಾನವನ್ನು ಖಂಡಿತವಾಗಿಯೂ ಊಹಿಸಲು ಸಾಧ್ಯವಿಲ್ಲವೇನೋ. 2019ರಲ್ಲಿ ಫಿನ್ಲೆಂಡ್‌ನ ಪ್ರಧಾನಿಯಾಗಿ ಈ ಯುವತಿ ಆಯ್ಕೆಯಾದಾಗ ಅವರಿಗೆ ಕೇವಲ 37 ವರ್ಷ. ಯೂರೋಪ್‌ನ ಅತ್ಯಂತ ಕಿರಿಯ ಪ್ರಾಯದ ನಾಯಕಿಯಾಗಿ ಹೆಸರು ಮಾಡಿದ ಅವರು ಪ್ರಧಾನಿ ಹುದ್ದೆಯಿಂದ ಕೆಳಗಿಳಿದು ಈಗಷ್ಟೇ ನಾಲ್ಕು ತಿಂಗಳು. ಆಗಲೇ ರಾಜಕೀಯ ಬದುಕಿಗೆ ವಿದಾಯ ಹೇಳಿರುವ ಅವರು, ಹೊಸ ವೃತ್ತಿ ಅರಸಿ ಹೊರಟಿದ್ದಾರೆ. ಅವರೇ ಸನ್ನಾ ಮರೀನ್.

ಅತ್ಯಂತ ಲವಲವಿಕೆಯ ನಾಯಕಿ ಎಂದು ಹೆಸರಾಗಿರುವ ಸನ್ನಾ, ಅಷ್ಟೇ ದೊಡ್ಡ ಪ್ರಮಾಣದಲ್ಲಿ ವಿವಾದಗಳನ್ನೂ ಮೈಮೇಲೆ ಎಳೆದುಕೊಂಡವರು ಮತ್ತು ಅವುಗಳನ್ನು ಯಶಸ್ವಿಯಾಗಿ ಮೆಟ್ಟಿ ನಿಂತವರು. ಪ್ರಧಾನಿಯಾಗಲು ಅವರು ಸವೆಸಿದ ಹಾದಿಯೇನೂ ಹೂವಿನದಾಗಿರಲಿಲ್ಲ. ಐದು ಪಕ್ಷಗಳ ಕಿಚಡಿ ಸರ್ಕಾರವನ್ನು ಯಶಸ್ವಿಯಾಗಿ ಮುನ್ನಡೆಸಿದವರು ಅವರು. ಕೋವಿಡ್ ಸಾಂಕ್ರಾಮಿಕವನ್ನು ಅವರ ಸರ್ಕಾರ ನಿರ್ವಹಿಸಿದ ರೀತಿ ಜಾಗತಿಕ ಮೆಚ್ಚುಗೆಗೆ ಪಾತ್ರವಾಗಿತ್ತು. ರಷ್ಯಾ ವಿರುದ್ಧ ಏಳೂವರೆ ದಶಕಗಳಿಂದ ಅವರ ಸರ್ಕಾರ ಕಾಪಾಡಿಕೊಂಡು ಬಂದಿದ್ದ ತಟಸ್ಥ ನೀತಿಗೆ ತಿಲಾಂಜಲಿ ನೀಡಿ, ಎದುರಾಳಿ ನ್ಯಾಟೊ ಬಣವನ್ನು ಸೇರುವಂತಹ ದಿಟ್ಟ ನಿರ್ಧಾರವನ್ನೂ ತೆಗೆದುಕೊಂಡವರು ಸನ್ನಾ. ರಷ್ಯಾದಿಂದ ಎರಗಬಹುದಾದ ಅಪಾಯವನ್ನು ಲೆಕ್ಕಿಸದೆ ಉಕ್ರೇನ್ ಪರವಾಗಿ ದೊಡ್ಡದಾಗಿ ಧ್ವನಿ ಎತ್ತಿದವರು. ಇಂತಹ ಡೈನಾಮಿಕ್ ನಾಯಕಿ ಈಗ ಇದ್ದಕ್ಕಿದ್ದಂತೆ ರಾಜಕೀಯ ಪಥದಿಂದಲೇ ದೂರ ಸರಿದಿದ್ದಾರೆ.

ಟೋನಿ ಬ್ಲೇರ್ ಇನ್‌ಸ್ಟಿಟ್ಯೂಟ್ ಫಾರ್ ಗ್ಲೋಬಲ್ ಚೇಂಜ್‌ನ 'ಸ್ಟ್ರಾಟೆಜಿಕ್ ಕೌನ್ಸೆಲರ್' ಆಗಿ ಹೊಸ ಹೊಣೆ ಹೊತ್ತುಕೊಳ್ಳುತ್ತಿದ್ದಾರೆ. ಈ ಸಂಸ್ಥೆ, ಹಲವು ದೇಶಗಳಿಗೆ ನೀತಿ ನಿರೂಪಣೆಯಲ್ಲಿ ನೆರವು ನೀಡುವ ಕೆಲಸ ಮಾಡುತ್ತಿದೆ. ಅದರ ಉಸ್ತುವಾರಿಯನ್ನು ಇನ್ನುಮುಂದೆ ಸನ್ನಾ ನೋಡಿಕೊಳ್ಳಲಿದ್ದಾರೆ. 'ಹೌದು, ಈಗ ಹೊಸ ದಾರಿಯಲ್ಲಿ ನಡೆಯುವ ಸಮಯ. ನಾನು ಯಾವುದೇ ಹಾದಿಯಲ್ಲಿ ಹೆಜ್ಜೆ ಹಾಕಿದರೂ ಫಿನ್ಲೆಂಡ್‌ನ ಒಳಿತಾಗಿ ಕೆಲಸ ಮಾಡುವುದನ್ನು ಮುಂದುವರಿಸುವೆ' ಎನ್ನುತ್ತಾರೆ. ರಾಜಕೀಯದಿಂದ ದೂರ ಸರಿಯುವ ನಿರ್ಧಾರ ಹೊರಬಿದ್ದ ಬೆನ್ನಹಿಂದೆಯೇ, ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿಯ ಮುಖ್ಯಸ್ಥರ ಹುದ್ದೆಯನ್ನೂ ಆಕೆ ತೊರೆದಿದ್ದಾರೆ.

ರಷ್ಯಾ ಜತೆಗೆ ಗಡಿ ಹಂಚಿಕೊಂಡಿರುವ ಫಿನ್ಲೆಂಡ್, ಎರಡನೇ ಜಾಗತಿಕ ಮಹಾಯುದ್ಧದ ಸಂದರ್ಭದಲ್ಲಿ ಸೋವಿಯತನ್ನರ ಕೈಯಲ್ಲಿ ಸೋಲುಂಡಿತ್ತು. ನಂತರದ ದಿನಗಳಲ್ಲಿ ತನ್ನ ಸುರಕ್ಷತೆಗಾಗಿ ತಟಸ್ಥ ನೀತಿಯನ್ನು ಅನುಸರಿಸುತ್ತಾ ಬಂದಿತ್ತು. ಈ ಐತಿಹಾಸಿಕ ಹಿನ್ನೆಲೆಯನ್ನು ಬದಿಗಿಟ್ಟು ವ್ಲಾದಿಮಿರ್ ಪುಟಿನ್ ವಿರುದ್ಧ ಫಿನ್ಲೆಂಡ್ ಈಗ ತೊಡೆತಟ್ಟಿ ನಿಲ್ಲಲು, ನ್ಯಾಟೊ ಬಣವನ್ನು ಸೇರಲು ಸನ್ನಾ ಅವರೇ ಕಾರಣ.

ಸನ್ನಾ ಅವರ ದಿಟ್ಟ ನಿಲುವುಗಳು ಕೇವಲ ಸಾರ್ವಜನಿಕ ಜೀವನಕ್ಕೆ ಸೀಮಿತವಾಗಿರಲಿಲ್ಲ. ಖಾಸಗಿ ಬದುಕಿನಲ್ಲೂ ಅಂತಹ ದಿಟ್ಟ ಹೆಜ್ಜೆ ಇಟ್ಟವರು. ಅದಕ್ಕಾಗಿ ವಿವಾದಗಳನ್ನೂ ಮೈಮೇಲೆ ಎಳೆದುಕೊಂಡವರು. ಪ್ರಧಾನಿಯವರ ಅಧಿಕೃತ ನಿವಾಸದಲ್ಲಿ ಮೋಜಿನ ಕೂಟಗಳನ್ನು ಏರ್ಪಡಿಸಿ, ಗೆಳತಿರೊಂದಿಗೆ ಅವರು ನೃತ್ಯ ಮಾಡಿದ್ದರು. ಕೂಟದಲ್ಲಿ ಪಾಲ್ಗೊಂಡಿದ್ದ ಇಬ್ಬರು ಮಹಿಳೆಯರು ಟಾಪ್‌ಲೆಸ್ ಆಗಿ, ಪರಸ್ಪರ ಚುಂಬಿಸುತ್ತಿದ್ದ ಚಿತ್ರ ಬಹಿರಂಗಗೊಂಡಿತ್ತು. ಬೆನ್ನಹಿಂದೆಯೇ ಸನ್ನಾ ಅವರ ನೃತ್ಯದ ದೃಶ್ಯಗಳಿದ್ದ ತುಣುಕುಗಳೂ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು. 'ಹೌದು, ನಾನು ನೃತ್ಯ ಮಾಡಿದ್ದೇನೆ, ಹಾಡಿದ್ದೇನೆ, ಪಾರ್ಟಿ ಮಾಡಿದ್ದೇನೆ. ಕಾನೂನುಬದ್ಧವಾಗಿಯೇ ನಡೆದುಕೊಂಡಿದ್ದೇನೆ. ಪ್ರಧಾನಿಯಾದರೇನು? ನನಗೆ ಖಾಸಗಿ ಜೀವನ ಇರುವುದಿಲ್ಲವೇ' ಎಂದೂ ಆಕೆ ಕೇಳಿದ್ದರು. ಪ್ರತಿಭಟನೆಯ ಧ್ವನಿ ಹೆಚ್ಚಾಗುತ್ತಿದ್ದಂತೆಯೇ ದೇಶದ ಜನರ ಕ್ಷಮೆಯಾಚಿಸಿದ್ದ ಸನ್ನಾ, ಉದ್ದೀಪನ ಮದ್ದು ಸೇವನೆ ಪರೀಕ್ಷೆಗೂ ಒಳಗಾಗಿದ್ದರು. ತಾವು ಆ ಮೋಜಿನ ಕೂಟದಲ್ಲಿ ಮದ್ದು ಸೇವನೆ ಮಾಡಿರಲಿಲ್ಲ ಎಂಬುದನ್ನು ಸಾಬೀತುಮಾಡಿದ್ದರು.

ಹೊಸ ಹೊಸ ವಿನ್ಯಾಸದ ವಸ್ತ್ರಗಳನ್ನು ತೊಟ್ಟು, ಹಲವು ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದು ಅವರ ರೂಢಿಯಾಗಿತ್ತು. 'ಹಾಟ್ ಗರ್ಲ್' ತರಹದ ಕುಹಕದ ನುಡಿಗೂ ವಿರೋಧಕ್ಕೂ ಲೆಕ್ಕಿಸದೆ ಬೋಲ್ಡ್ ಆಗಿ ನಡೆದುಕೊಂಡವರು ಆಕೆ. ಸನ್ನಾ ಚಿಕ್ಕವರಿದ್ದಾಗ ಅವರ ಕುಟುಂಬ ತೀವ್ರವಾದ ಆರ್ಥಿಕ ಸಂಕಷ್ಟ ಎದುರಿಸುತ್ತಿತ್ತು. ಕುಡುಕ ತಂದೆಯಿಂದ ಸಮಸ್ಯೆ ಮತ್ತಷ್ಟು ಬಿಗಡಾಯಿಸಿತ್ತು. ಬಾಲ್ಯದ ಹಲವು ಬೇಡಿಕೆಗಳನ್ನು ಅದುಮಿಟ್ಟು ಅಧ್ಯಯನಾಸಕ್ತರಾದವರು ಅವರು. ಕಾಲೇಜಿನಲ್ಲಿ ಓದುವಾಗ ಬೇಕರಿಯೊಂದರಲ್ಲಿ ಕ್ಯಾಷಿಯರ್ ಆಗಿ ತಮ್ಮ ಖರ್ಚಿಗೆ ಬೇಕಾದ ಹಣವನ್ನು ತಾವೇ ಸಂಪಾದಿಸುತ್ತಿದ್ದರು. ಸನ್ನಾ ಅವರ ತಂದೆ–ತಾಯಿ ವಿಚ್ಛೇದನ ಪಡೆದಾಗ, ಅವರ ತಾಯಿ ಆರಿಸಿಕೊಂಡಿದ್ದು ಮಹಿಳಾ ಸಂಗಾತಿಯನ್ನು. ಅವರ ಪ್ರೀತಿಯ ಆಸರೆಯಲ್ಲಿ ಬೆಳೆದವರು ಈಕೆ. ಸುಮಾರು ಎರಡು ದಶಕಗಳವರೆಗೆ ಮಾರ್ಕಸ್ ರೈಕೊನನ್ ಅವರನ್ನು ಸಂಗಾತಿಯಾಗಿ ಹೊಂದಿದ್ದ ಆಕೆ, ಮಗುವಿನ ತಾಯಿಯೂ ಆದ ಬಳಿಕ, ಮಾರ್ಕಸ್ ಜತೆ ವಿವಾಹವಾಗಿದ್ದರು. ಈಗ ಇಬ್ಬರೂ ವಿಚ್ಛೇದನಕ್ಕೆ ಅರ್ಜಿ ಹಾಕಿದ್ದಾರೆ.

ಇಬ್ಬರೂ ಮಹಿಳಾ ಪಾಲಕರ ಆಶ್ರಯದಲ್ಲಿ ಬೆಳೆದಿದ್ದರಿಂದ ನನ್ನದು ರೇನ್‌ಬೋ ಫ್ಯಾಮಿಲಿ ಎಂದು ಸನ್ನಾ ಬಣ್ಣಿಸುತ್ತಾರೆ. ಪ್ರಧಾನಿ ಕಚೇರಿಯಲ್ಲಿ ಇದ್ದಷ್ಟು ದಿನ ಊಟಕ್ಕಾಗಿ ಹೆಚ್ಚಿನ ಖರ್ಚು ಮಾಡಿದ ದೂರೂ ಸನ್ನಾ ಅವರ ಮೇಲಿದೆ. ಸೋಜಿಗದ ಸಂಗತಿ ಎಂದರೆ, ಆಕೆ ಪಕ್ಕಾ ಸಸ್ಯಾಹಾರಿಯಂತೆ! ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65